

**ಅಮ್ಮಂದಿರು ಮಾಡುವ ಪ್ರತಿಯೊಂದು ಕೆಲಸವೂ ಮಗುವಿನ ಪಾಲಿಗೆ ಕಲಿಕೆ**

ಮಕ್ಕಳಿಗೆ ಉಣ್ಣಲು ಒಂದು ಹಿಡಿ ಅನ್ನ ಇಲ್ಲದ ಕಾಲದಲ್ಲಿಯೂ ಆಹಾರವೇ ಆದ್ಯತೆಯಾಗಿತ್ತು. ಈಗ ಆಹಾರವು ಎಲ್ಲರಿಗೂ ತಲುಪುತ್ತಿದೆ ಎಂದರೆ ಅದಕ್ಕೆ ಅಭಿವೃದ್ಧಿಯೇ ಕಾರಣ. ಎಲ್ಲ ಪ್ರಾಣಿಗಳಲ್ಲೂ ಆಗುವಂತೆ ಮ್ಯುಟೇಷನ್ ಎನ್ನುವುದು ಮನುಷ್ಯನಲ್ಲಿಯೂ ಆಗುತ್ತದೆ ಅಲ್ಲವೇ' ಎಂದು ಪ್ರಶ್ನಿಸುತ್ತಾರೆ ಅಭಿವೃದ್ಧಿಯ ಪಥವನ್ನು ಬೆಂಬಲಿಸುವ ಹಿತಾ ಶಿವರಾಂ.

ಹಿತಾ ಅವರ ಮಗಳು ಈಗಷ್ಟೇ ಎಲ್‌ಕೆಜಿ ಓದುತ್ತಿದ್ದಾಳೆ. ಮಗಳ ಪಾಲನೆ–ಪೋಷಣೆ ಅನುಭವದಲ್ಲಿ ಹಿತಾ ಅವರು ಕಂಡುಕೊಂಡಿರುವ ಅನುಭವವನ್ನು ಅವರ ಮಾತುಗಳಲ್ಲೇ ಕೇಳಿ:

‘ನಮ್ಮ ಮುಂದೆ ನಿಜವಾದ ಸವಾಲು ಇರುವುದು ಮಕ್ಕಳಿಗೆ ಒದಗಿಸುವ ಶಿಕ್ಷಣದಲ್ಲಿ. ಮಕ್ಕಳು ಚೂಟಿಯಾಗಿದ್ದಾರೆ ಎಂದು ಎಲ್ಲರೂ ಹೇಳುತ್ತಾರೆ. ಅವರಲ್ಲಿರುವ ಶಾರ್ಪ್‌ನೆಸ್ ಅನ್ನು ಪಳಗಿಸುವ, ಅವರಲ್ಲಿರುವ ಮೃಗೀಯತೆಯನ್ನು ತೊಡೆದು ಹಾಕಿ, ಅವರನ್ನು ಮನುಷ್ಯತ್ವದ ಸರಿ ದಾರಿಗೆ ತರುವ ನಿಟ್ಟಿನಲ್ಲಿ ಶಿಕ್ಷಣವು ಅಪ್‌ಡೇಟ್ ಆಗಿದೆಯೇ? ಸರ್ಕಾರದ ಮಟ್ಟದಲ್ಲಿರಬಹುದು ಅಥವಾ ಸಾಮಾಜಿಕ ಪ್ರಗತಿಯ ವಿಷಯದಲ್ಲಾಗಿರಬಹುದು. ಈಗ ನೋಡಿ, ಎಷ್ಟೊಂದು ಅಡ್ವಾನ್ಸ್‌ಡ್ ಮೊಬೈಲ್‌ಗಳು ಬರುತ್ತಿವೆ. ನಮ್ಮ ಬದುಕಿಗೆ ಬೇಕಾದ ಎಲ್ಲ ಅಂಶಗಳನ್ನೂ ಮೊಬೈಲ್ ಒಳಗೊಂಡಿದೆ. ವಾಚು, ರೇಡಿಯೊ, ಅಲರಾಂಗಳು, ಆ್ಯಪ್‌ಗಳೆನ್ನುತ್ತ ಒಂದು ಮೊಬೈಲ್ ಇದ್ದರೆ ದೇವರೇ ನಮ್ಮ ಬಳಿಯಿದ್ದಾರೆ ಎಂಬಷ್ಟು ಆತ್ಮವಿಶ್ವಾಸದಿಂದ ಇರುತ್ತೇವೆ. ನನ್ನ ಮಗನಿಗೆ ಸಂಜೆ ಪಾಠ ಹೇಳುವಾಗ ಈ ಮೊಬೈಲ್‌ಗಳಲ್ಲಿಯೇ ವಿಡಿಯೊಗಳನ್ನು ತೋರಿಸುತ್ತೇನೆ. ಅವನಿಗೆ ಹೇಗೆ ಕಲಿಸಬೇಕು ಎನ್ನುವುದರ ಮಾಹಿತಿಯನ್ನು



ಡಾ. ಅನಸೂಯ ಭಾರದ್ವಾಜ್